ಪಾಳುಹೊಲ; ಮಾಗಿಕಾಲದಲ್ಲಿ ಹುಲ್ಲಿನೆಸಳ ಮೂಗಿಗೆ ಮೂಗುತಿ ಜೋಡಿಸುತ್ತಿದ್ದ ಇಬ್ಬನಿ; ಹುಲ್ಲುಬೀಜ ತಿನ್ನಲು ಬರುವ ಪುಟ್ಟಹಕ್ಕಿಗಳು; ರಾತ್ರಿ ಸಣ್ಣ ಸಪ್ಪಳವಾದರೂ 'ಹುತ್ತೀತ್ ತಿತ್' ಎಂದರಚುವ ಟಿಟ್ಟಿಭಹಕ್ಕಿ; ಅಪರೂಪಕ್ಕೆ ಕಾಣುವ ಮೊಲಗಳು; ಹೊಲಗಳ ನಡುವೆ ಕಿರುಹೊಳೆಯಂತೆ ಹರಿದ ತುಂಗಭದ್ರಾ ಬಲದಂಡೆ ಕಾಲುವೆ; ಅದನ್ನು ದಾಟಿದರೆ ಅರಣ್ಯೋಪಾದಿ ಬೆಳೆದ ಕಬ್ಬುಗದ್ದೆ; ಅದಕ್ಕೆ ಲಗತ್ತಾಗಿ ತೆಂಗಿನತೋಟ. ಮಾವಿನ ತೋಪು – ಕೆಲವೇ ತಿಂಗಳಲಿ ನಾನು ಕವಿಯಾಗುವುದು ಖಚಿತವೆನಿಸಿತು.

ಈ ಪ್ರದೇಶದಲ್ಲಿದ್ದ ಏಕೈಕ ಸಮಸ್ಯೆಯೆಂದರೆ ಕಳ್ಳರ ಕಾಟ. ಬಡಾವಣೆಯಲ್ಲಿದ್ದ ಜನ, ಬೆಳಗಾದರೆ ಕಳೆದ ರಾತ್ರಿ ಯಾರ ಮನೆಗೆ ತುಡುಗರು ನುಗ್ಗಿದ್ದರು ಮತ್ತು ಹೇಗೆ ದೋಚಿದರು ಎಂಬುದನ್ನು, ಯುದ್ಧವಾರ್ತೆಯನ್ನು ಮಂತ್ರಿಮಂಡಲ ಚರ್ಚಿಸುವಂತೆ ಗಂಭೀರವಾಗಿ ಚರ್ಚಿಸುತ್ತಿದ್ದರು. ಸಂಬಂಧಪಟ್ಟ ಸಂತ್ರಸ್ತರ ಮನೆಗೆ ಹೋಗಿ ಸಂತಾಪ ಸೂಚಿಸಿದ ಬಳಿಕವೆ ಎಲ್ಲರ ಪ್ರಾತರ್ವಿಧಿಗಳು ಸುರುವಾಗುತ್ತಿದ್ದವು. ನಮ್ಮ ಮೀನ್ ವ್ಯಸನ ಇಂಥ ದೊಡ್ಡಬೆಲೆ ತೆರುವಂತೆ ಮಾಡುತ್ತದೆಯೆಂದು ಗೊತ್ತಿದ್ದರೆ, ಮೀನೆಂಬ ಶಬ್ದವನ್ನೆ ನಮ್ಮ ನಿಘಂಟಿನಿಂದ ಹೊರಹಾಕಲು ತಯಾರಿದ್ದೆವು. ಒಳ್ಳೇ ಊರನ್ನು ಬಿಟ್ಟು ಸುಖಾಸುಮ್ಮನೆ ಪರಸ್ಥಳದಲ್ಲಿ ಪ್ರಾಣಕೊಡುವ ದುರ್ಗತಿ ಸಮೀಪಿಸುತ್ತಿರುವುದು ಖಚಿತವಾಯಿತು. ಆ ಪ್ರದೇಶದಲ್ಲಿದ್ದ ಬಾಡಿಗೆ ಮನೆಗಳ ಕೀರ್ತಿಯೆಂದರೆ, ಅವುಗಳಲ್ಲಿ ಯಾರೂ ಮೂರು ತಿಂಗಳಿಗಿಂತ ಹೆಚ್ಚುಕಾಲ ವಾಸವಾಗಿರಲಿಲ್ಲ. ಕಳವಳದಿಂದ ಕೃಷ್ಣಪಕ್ಷದ ಚಂದ್ರನಂತೆ ಚಿಕ್ಕದಾಗುತ್ತಿದ್ದ ನಮ್ಮ ಮುಖವನ್ನು ಅವಲೋಕನ ಮಾಡಿದ ಮನೆಯೊಡೆಯ, ನಾವು ಪಲಾಯನ ಮಾಡಬಹುದೆಂಬ ಆತಂಕದಿಂದ, ಹೊರಬಾಗಿಲಿಗೆ ಕೊಲ್ಯಾಪ್ಸಬಲ್ ಗೇಟ್ ಅಳವಡಿಸಿ ಕೊಟ್ಟನು. ಗೇಟನ್ನು ಕೂಡಿಸಲು ಬಂದ ಕೆಲಸಗಾರರು, ಕೆಲಸ ಮುಗಿದ ಬಳಿಕ ಅದನ್ನು ಹೇಗೆ ಕ್ಷಣಾರ್ಧದಲ್ಲಿ ಭೇದಿಸಿ ಕಳ್ಳರು ಒಳನುಗ್ಗಬಹುದು ಎಂಬ ಘೋರಸತ್ಯ ಹೇಳಿಹೋದರು. ಅವರ ಸದುದ್ದೇಶ ಗೇಟನ್ನೇ ನಂಬಿ ಇರಬಾರದೆಂದೂ ರಕ್ಷಣೆಗೆ ಬೇರೆ ವ್ಯವಸ್ಥೆಯನ್ನು ಮಾಡಿಕೊಂಡಿರಬೇಕೆಂದೂ ಸೂಚಿಸುವುದಾಗಿತ್ತು. ಇದುವೇ ನಮ್ಮ ಮನೆಗೆ ಶ್ವಾನವೊಂದರ ಆಗಮನಕ್ಕೆ ಪೂರ್ವಪೀಠಿಕೆ ಬರೆಯಿತು. ವಿಷಯ ತಿಳಿದವರೇ ಮಾತೃಸ್ವರೂಪಿ ಅತ್ತೆಯವರು ನಾಯಾಗಮನದ ಪ್ರಸ್ತಾವನೆಯನ್ನು ಖಂಡತುಂಡ ವಿರೋಧಿಸಿದರು. ಮುಸ್ಲಿಮರಿಗೆ ನಾಯಿ ನಿಷಿದ್ಧವೆಂದೂ ಅದಿರುವ ಕಡೆ ದೇವದೂತರ ಕೃಪಾಛಾಯೆ ಸುಳಿಯುವುದಿಲ್ಲವೆಂದೂ ಅವರು ಹೇಳಿದರು. ನಾಯಿಸಾಕಣೆ ಮಾಡಿದ್ದಕ್ಕೆ ಪರಲೋಕದಲ್ಲಿ ಕಠೋರ ಶಿಕ್ಷೆ ಸಿಗಲಿ, ಇಹಲೋಕದಲ್ಲಿ ನಮ್ಮ ಅಮೂಲ್ಯ ಪ್ರಾಣ ಉಳಿಯಲಿ ಎಂದು ನಾನು ಸ್ಪಷ್ಟವಾಗಿ ಹೇಳಿದೆ.

ಹೀಗಿರುತ್ತ ಒಂದು ರಾತ್ರಿ ಬಡಾವಣೆಯಲ್ಲಿ ಸಿನಿಮೀಯ ರೀತಿಯಲ್ಲಿ ಕಳ್ಳತನವಾಯಿತು. ಹೈಸ್ಕೂಲ್ ಮಾಸ್ತರರೊಬ್ಬರು, ನಿವೃತ್ತಿ ಹೊತ್ತಲ್ಲಿ ಬಂದ ಪೆನ್ಶನ್ ಮೊತ್ತದಲ್ಲಿ ಬಡಾವಣೆಯ ಕೊನೆಯಂಚಿಗೆ ಸಣ್ಣದೊಂದು ಮನೆ ರಚಿಸಿಕೊಂಡು ಮೊಂಡು ಧೈರ್ಯದಿಂದ ನೆಲೆಸಿದ್ದರು. ಅವರ ಎದೆಗಾರಿಕೆಗೆ ಎರಡು ಕಾರಣವಿದ್ದವು. ಒಂದು – ಕಮ್ಯುನಿಸ್ಟರಾಗಿದ್ದ ಅವರಲ್ಲಿ ದೋಚುವಷ್ಟು ಸಂಪತ್ತಿರಲಿಲ್ಲ. ಎರಡು – ಬಳ್ಳಾರಿ ಸೀಮೆಯ ಬಹುತೇಕ ಕಾಮ್ರೇಡರಿಗೆ ರಾಜಕೀಯ ಗುರುಗಳಾಗಿದ್ದ ಅವರಿಗೆ, ಕೂಗಿದರೆ ಓಗೊಡುವ ನೂರಾರು ಶಿಷ್ಯರು ಊರುತುಂಬ ನೆಲೆಸಿದ್ದರು. ಈ ಪೂರ್ವಾಪರ ಲೆಕ್ಕಿಸದ ಕಳ್ಳರು, ದೊಡ್ಡಸೈಜುಗಲ್ಲಿಂದ ಬೇವಿನ ಕಟ್ಟಿಗೆಯಿಂದ ಸಮೆದ ದ್ವಾರಬಂಧದ ಅಸಿನಡುವನ್ನು ಬಾಳೆಗಿಡವನ್ನು ಆನೆ ಚೆಲ್ಲಾಡಿದಂತೆ